**Q.P. Code – 32405**

# Fourth Semester B.Com./B.B.M./B.H.M. Degree Examination, April/May 2019

*(CBCS Scheme)*

**ಕನ್ನಡ ಭಾಷೆ**

## Paper IV – ಊರುಕೇರಿ (ಭಾಗ–2) ಮತ್ತು ಪ್ರಬಂಧ ನಂದನ – 4

*Time : 3 Hours]* *[Max. Marks : 90*

ಭಾಗ – 'ಅ'

ಊರುಕೇರಿ (ಭಾಗ – 2) (ಆತ್ಮಕಥೆ)

I. (ಅ) **ಒಂದರ** ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಸ್ವಾಗತ ಭಾಷಣ ಮಾಡುವ ವ್ಯಕ್ತಿ ಈಗ ತಹಶೀಲ್‌ದಾರರಾದ ರಾಜಣ್ಣನವರಿಗೆ ಇಂಥವರಿಂದ ಮಾಲಾರ್ಪಣೆ ಎಂದು ಹೇಳುತ್ತಿದ್ದಂತೆ, ಮೊದಲ ಆತಿಥಿಗೆ ಆದ ಅನುಭವದಿಂದ ಜಾಗ್ರತರಾಗಿದ್ದ ರಾಜಣ್ಣನವರು ಹಾರ ಹಿಡಿದು ಬರುತ್ತಿದ್ದ ಸಂಘಟಕನನ್ನು ಉದ್ದೇಶಿಸಿ 'ಅಯ್ಯ ನಾನು ರಾಜಣ್ಣ ಇಲ್ಲಿದ್ದೀನಿ ಬಾರಪ್ಪ' ಎಂದು ನಿಸ್ಸಂಕೋಚವಾಗಿ ಕರೆದು ಹಾರ ಹಾಕಿಸಿಕೊಂಡರು. ವೇದಿಕೆಯ ಮೇಲೆ ಕುಳಿತಿದ್ದ ಕೆಲವು ಆತಿಥಿಗಳು ರಾಜಣ್ಣನವರ ಜಾಣ್ಮೆಯನ್ನು ಮೆಚ್ಚಿದರು.

2. ಯಾರಾದರೂ ಹುಡುಗರನ್ನು ನಿಮ್ಮ ಟೀಚರ್ ಯಾರು ಎಂದ ಕೂಡಲೇ ಅವರು ನನ್ನನ್ನು ತೋರಿಸುತ್ತಿದ್ದರು. ನಾನು ವಿದ್ಯಾರ್ಥಿಗಳಿಗಿಂತ ಚಿಕ್ಕವನಾಗಿ ಕಾಣುತ್ತಿದ್ದೆ. ಆದ್ದರಿಂದ ನೋಡಿದವರಿಗೆ ನಾನು ಉಪಾಧ್ಯಾಯ ಎಂಬ ನಂಬಿಕೆ ಬರುತ್ತಿರಲಿಲ್ಲ. ವಿದ್ಯಾರ್ಥಿಗಳೆಲ್ಲ ಸರ್ವಾನುಮತದಿಂದ ಇವರೇ ನಮ್ಮ ಗುರುಗಳು ಎಂದು ಹೇಳುತ್ತಿದ್ದುದರಿಂದ ಕೇಳಿದವರು ನಂಬಲೇ ಬೇಕಾಗಿತ್ತು. ಉಪಾಧ್ಯಾಯನೆಂದು ಗುರುತಿಸಬೇಕಾದರೆ ಸೂಟು ಧರಿಸಬೇಕೆಂದು ಕೆಲವು ಹಿತೈಷಿಗಳು ನನಗೆ ಸಲಹೆ ಮಾಡಿದ್ದರು. ಈ ಸಲಹೆಯನ್ನು ನಾನು ಅಂಗೀಕರಿಸಲಿಲ್ಲ. ಕೊನೆಯ ಪಕ್ಷ ಟೈ ಕಟ್ಟುವಂತೆ ಅವರು ಕೇಳಿಕೊಂಡರು ನಾನು ಅದಕ್ಕೂ ಒಪ್ಪಲಿಲ್ಲ.

(ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. ಈ ಮಗುವನ್ನು ಕೊಂಚ ಎತ್ತಿಕೊಳ್ಳಣ್ಣ.
2. ಲೇ ಕೇಳಿದ್ರೆ ಒಂದ್ ಲೋಟ ಹಾಲ್ ಕೊಡ್ತೀರ್‌ಲಿಲ್‌ವೇನೋ? ಯಾಕೋ ಇಂಥ ಹಲ್ಕ ಕೆಲ್ಸ ಮಾಡ್ದೆ?
3. 'ದಲಿತನ ಮನೆಯಲ್ಲಿ ಊಟ ಹೇಗಿತ್ತು'?

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಕೋಣಂದೂರು ಲಿಂಗಪ್ಪನವರು ಏನಾಗಿದ್ದರು?
2. 'ಹೊಲೆ ಮಾದಿಗರ ಹಾಡು' ಇದು ಯಾರ ಕೃತಿ?
3. ಹೆಂಡ, ಬಾಡು, ಸೀರೆ ಕೇಳುತ್ತಿದ್ದ ದೇವತೆಯ ಹೆಸರೇನು?
4. ಕಾಳೇಗೌಡರು ಯಾರಿಗೆ, ಶ್ಯೂರಿಟಿ ಹಾಕಿ ಸಾಲ ಕೊಡಿಸಿದ್ದರು?
5. ದಲಿತರನ್ನು ರಂಗಭೂಮಿಗೆ ಕರೆ ತಂದವರು ಯಾರು?

(ಈ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 2 = 4)**

1. ಆತ್ಮಕಥೆ
2. ಭಾಗ್ಯವಂಚಿತ
3. ವಿವಾಹದ ವಿಳಂಬ

II. (ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2 × 5 = 10)**

1. ಸ್ಮಶಾನದಲ್ಲಿ ಮಧುಚಂದ್ರ
2. ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಸಚಿವ ಬಸವಲಿಂಗಪ್ಪರವರ ಕಾವ್ಯ ಪ್ರೀತಿ
3. ಕೆ.ಎಂ. ಶಕರಪ್ಪ

(ಆ) **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಸಿದ್ಧಲಿಂಗಯ್ಯನವರ ವ್ಯಕ್ತಿತ್ವ ಊರುಕೇರಿಯಲ್ಲಿ ಅನಾವರಣಗೊಂಡಿರುವ ಬಗೆಯನ್ನು ವಿವರಿಸಿ.
2. 'ಚಕ್ಕುಲಿಯ ಪ್ರಸಂಗ ಮತ್ತು ಕವಿತೆಯ ಲಂಚ' ಕುರಿತು ಬರೆಯಿರಿ.
3. ಬಾನಂದೂರು ಕೆಂಪಯ್ಯ, ಕಾಳೇಗೌಡ ನಾಗಾವರ ಡಿ.ಆರ್. ನಾಗರಾಜ್. ಇವರಲ್ಲಿ ಇಬ್ಬರನ್ನು ಪರಿಚಯಿಸಿ.

## ಭಾಗ – 'ಆ'

## ಪ್ರಬಂಧ ನಂದನ – ೪

III. (ಅ) **ಒಂದರ** ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. ಅವರ ಮುಂದೆ ನೆಲದ ಮೇಲೆ ಬೆರಳಿನಿಂದಿಟ್ಟ ಏಳು ಎಣ್ಣೆಯ ಚುಕ್ಕಿಗಳಿವೆ? ಅವು ಅಶ್ವತ್ಥಾಮ ಹನುಮಂತ ಮೊದಲಾದ ಪುರಾಣ ಪ್ರಸಿದ್ಧರಾದ ಸಪ್ತ ಚಿರಂಜೀವಿಗಳ ಸ್ಮಾರಕ ತೈಲ ಬಿಂದುಗಳು. ಆದಾದ ಮೇಲೆ ಅವರು ಏನೇನೋ ಬಾಯಲ್ಲಿ ವಟಗುಟ್ಟುತ್ತಾ ಬಂಗಾಳದ ವೈಷ್ಣವರು ನಾಮಗಳನ್ನು ಬಳಿದುಕೊಳ್ಳುವಂತೆ ಎದೆ, ಹೊಟ್ಟೆ, ತೋಳು, ಬೆನ್ನು ಮೊದಲಾದ ಕಡೆ ಎಣ್ಣೆಯ ಬಟ್ಟುಗಳನ್ನು ಇಟ್ಟುಕೊಂಡು ಆಳಿಗೆ ಎಣ್ಣೆ ಇಜ್ಜಲು ಅಪ್ಪಣೆ ಕೊಡುವರು.

2. ಒಂದೇ ಒಂದು ತುಂಬೆಯ ಹೂವನ್ನು ಅಂಗೈಯ ಮೇಲೆ ಇರಿಸಿಕೊಂಡು ಪರಿಶೀಲಿಸಿ; ಅದರ ಆಕೃತಿಯೂ ತುಂಬಿಯ ಆಕೃತಿಯೆ. ಹಾರುವ ತುಂಬಿ ಅದು. ಹೂ ತುಂಬಿ ಇದು; ಅದು ಕಪ್ಪು, ಇದು ಬಿಳುಪು; ಅದರ ತುಂಬ ಮಧು, ಇದರ ತುಂಬ ಮಕರಂದ; ಮಧುವನ್ನು ಒಂದು ಒಯ್ಯುತ್ತದೆ, ಇನ್ನೊಂದು ಹೊಯ್ಯುತ್ತದೆ, ಅಂತೂ, ಮಧುವನ್ನು ತುಂಬಿಕೊಂಡು ಮಧುವನ್ನು ತುಂಬುವುದಾಗಿ ಎರಡೂ ತುಂಬಿಗಳು ನನಗೆ ಎರಡೂ ಪ್ರಿಯವಾಗಿವೆ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ದಿವಾನ ಖಾನೆಯ ಅಂದ ಚೆಂದಕ್ಕೆ ಕಾರವಾದ ಪತ್ರಿಕೆ ಯಾವುದು?
2. ಮಲೆನಾಡಿನ ಚಿತ್ರಗಳು ಕೃತಿಯ ಕರ್ತೃ ಯಾರು?
3. ಕ್ಲಿಯೋಪಾತ್ರ ಯಾವ ಹಾಲಿನಿಂದ ಸ್ನಾನ ಮಾಡುತ್ತಿದ್ದಳು?
4. ತುಂಬೆ ಹೂ ಲೇಖನದ ಕರ್ತೃ ಯಾರು?
5. ಪಿ. ಲಂಕೇಶರ ಕೃತಿಯೊಂದನ್ನು ಹೆಸರಿಸಿ.

(ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 5 = 10)**

1. ತೀ.ನಂ. ಶ್ರೀ
2. ವ್ಯಾಸಂಗದ ಪ್ರಯೋಜನಗಳು
3. ಗುಬ್ಬಚ್ಚಿಯ ಗೂಡು

IV. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರ ಬರೆಯಿರಿ : **(2 × 10 = 20)**

1. 'ನೆಗಡಿ' ಉಂಟು ಮಾಡುವ ಮುಜುಗರವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ?
2. ದಿವಾನ ಖಾನೆಯ ಅಂದ ಚೆಂದವೇ ಸ್ವಚ್ಛಂದ ಬದುಕಿಗೆ ಮಾರಕ, ಹೇಗೆ? ವಿವರಿಸಿ.
3. ಅನಾದರಕ್ಕೆ ಒಳಗಾಗಿರುವ ಕತ್ತೆಯ ಶ್ರೇಷ್ಠತೆ 'ಧೇನುಕೋಪಾಖ್ಯಾನ' ಪ್ರಬಂಧದಲ್ಲಿ ಹೇಗೆ ನಿರೂಪಣೆಗೊಂಡಿದೆ? ತಿಳಿಸಿ.

---